**5ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಹಾಗೂ ಜೆಎಂಎಫ್ ಸಿ, ಮಂಗಳೂರು, ದ.ಕ.**

ದಿ: 12.11.2025ರಂದು ಸಾಕ್ಷಿದಾರರನ್ನು ಕರೆಯಿಸಿ, ಪ್ರಮಾಣವಚನ ಬೋಧಿಸಲಾಯಿತು.

**ಮುಂದುವರೆದ ಪಾಟೀ ಸವಾಲು– 1ನೇ ಪ್ರತಿವಾದಿ ಪರ ವಕೀಲರಿಂದ :**

ನಿಪಿ–13ರಿಂದ ನಿಪಿ–15ರ ದಾಖಲೆಗಳನ್ನು ಈ ದಾವಾದ ಸಲುವಾಗಿಯೇ ಸೃಷ್ಟಿ ಮಾಡಿ ಹಾಜರುಪಡಿಸಿದ್ದೇನೆ ಎಂದರೆ ಸರಿಯಲ್ಲ.

**ಮುಂದುವರೆದ ಪಾಟೀ ಸವಾಲು– 3ನೇ ಪ್ರತಿವಾದಿ ಪರ ವಕೀಲರಿಂದ :**

ನಾನು ಕಾನೂನು ರೀತಿಯಲ್ಲಿ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದಿಂದ ಅನುಮತಿ ಪಡೆಯದ ಕಾರಣ ನಾನು ಹೇಳುವ ಹಾಗೇ ದಾವಾ ಆಸ್ತಿಯ ಉದ್ದಕ್ಕೆ ರಾಷ್ಟ್ರೀಯ ಹೆದ್ದಾರಿಗೆ ಹೋಗಿ ಬರಲು ಹಕ್ಕು ಇದೆ ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಮೂರನೇ ಪ್ರತಿವಾದಿ ಸಾರ್ವಜನಿಕ ಹಿತಾಸಕ್ತಿಯಿಂದ ಬಸ್ ನಿಲ್ದಾಣವನ್ನು ಮಾಡಲು ಹೊರಟಿದ್ದೇ ಹೊರತು ನಮ್ಮ ಮೇಲಿನ ದ್ವೇಷದಿಂದ ಅಲ್ಲ ಎಂದರೆ ಸರಿಯಲ್ಲ. ನಾನು ಹೇಳಿದಂತೆ ಬಸ್ ನಿಲ್ದಾಣದ ವಿಸ್ತೀರ್ಣ 25 ಅಡಿ ಉದ್ದ ಮತ್ತು 10ಫೀಟ್ ಅಗಲ ಇರುವುದಿಲ್ಲ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರಕ್ಕೆ ಸಲ್ಲಿಸಿದ ನಕಾಶೆಯಂತೆ ಆ ಬಸ್ ನಿಲ್ದಾಣದ ವಿಸ್ತೀರ್ಣ ಉದ್ದ 6 ಅಡಿ ಮತ್ತು ಅಗಲ 4 ಮೀಟರ್ ಗಳು ಎಂದರೆ ಸಾಕ್ಷಿ ಸ್ಥಳದಲ್ಲಿ ಗುರುತಿಸಿರುವುದು ನಾನು ಹೇಳಿದಂತೆ ಎಂದು ನುಡಿದಿರುತ್ತಾರೆ. ಪೂರ್ವ ದಿಕ್ಕಿನಲ್ಲಿ ಇರುವ ನಮ್ಮ ಆಸ್ತಿಯು ಸುಮಾರು 75 ಅಡಿಗಳಷ್ಟು ಇರಬಹುದು. ನಿಪಿ–4ಕ್ಕೆ ಲಗತ್ತೀಕರಿಸಿದ ನಕಾಶೆಯನ್ನು ಸಾಕ್ಷಿಗೆ ತೋರಿಸಿ ಈ

ನಕಾಶೆಯಂತೆ ದಾವಾ ಆಸ್ತಿಯ ಪೂರ್ವ ದಿಕ್ಕಿನಲ್ಲಿ ಇರುವ ಆಸ್ತಿಯ ಅಳತೆ 21.86 ಮೀಟರ್ ಎಂದು ನಮೂದಿಸಿರುತ್ತಾರೆ ಎಂದರೆ ಸರಿ. ಸಾಕ್ಷಿಗೆ ಈ ಹಂತದಲ್ಲಿ ನಿಪಿ–15ನ್ನು ತೋರಿಸಿ ಸದರಿ ನಕಾಶೆಯ ಪೂರ್ವ ದಿಕ್ಕಿನಲ್ಲಿ ಸರ್ವೆ ನಂಬರ್ 120/3ಸಿ ಎಂದು ತೋರಿಸಿದ್ದಾರಾ ಎಂದರೆ ಸಾಕ್ಷಿ ಆ ಸರ್ವೆ ನಂಬರ್ ನ್ನು ತೋರಿಸಿರುವುದಿಲ್ಲ ಮತ್ತು ಅದನ್ನು ರಾಷ್ಟ್ರೀಯ ಹೆದ್ದಾರಿಗೆ ಬಿಟ್ಟ ಸ್ಥಳ ಎಂದು ನುಡಿದಿರುತ್ತಾರೆ. ಸರ್ವೆ ನಂಬರ್ 120/3ಸಿ ಸ್ಥಳ ರಾಷ್ಟ್ರೀಯ ಹೆದ್ದಾರಿಗೆ ಬಿಟ್ಟದ್ದು ಎಂದು ಆರ್ ಟಿಸಿಯಲ್ಲಿ ನಮೂದು ಇರುತ್ತದೆ. ಆ ಸರ್ವೆ ನಂಬರ್ 120/3ಸಿ ಸ್ಥಳ ವನ್ನು ಯಾರು ರಾಷ್ಟ್ರೀಯ ಹೆದ್ದಾರಿಗೆ ಬಿಟ್ಟಿರುತ್ತಾರೆ ಎಂಬುವುದಕ್ಕೆ ಸಂಬಂಧಪಟ್ಟಂತೆ ನಾನು ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಬಲ್ಲೆ. ನಿಪಿ–15ರ ನಕಾಶೆಯಂತೆ ನಮ್ಮ ಆಸ್ತಿ ರಾಷ್ಟ್ರೀಯ ಹೆದ್ದಾರಿಯಿಂದ ಎಷ್ಟು ದೂರದಲ್ಲಿ ಇದೆ ಎಂದು ತೋರಿಸಿರುವುದಿಲ್ಲ ಎಂದರೆ ಸರಿಯಲ್ಲ ಸಾಕ್ಷಿ ಮುಂದುವರೆದು 45 ಮೀಟರ್ ದೂರದಲ್ಲಿ ಇದೆ ಎಂದು ತೋರಿಸಿದ್ದೇವೆ ಎಂದು ನುಡಿದಿರುತ್ತಾರೆ. ಸರ್ವೆ ನಂಬರ್ 120/3ಸಿ ಆಸ್ತಿಯು ಸರ್ಕಾರಕ್ಕೆ ಸೇರಿದ್ದ ಆಸ್ತಿಯಾಗಿದ್ದರಿಂದ ಆ ಆಸ್ತಿಯಲ್ಲಿ ಬಸ್ ನಿಲ್ದಾಣ ನಿರ್ಮಿಸಲು ಆಕ್ಷೇಪಿಸುವ ಅಧಿಕಾರ ನನಗೆ ಇರುವುದಿಲ್ಲ ಎಂದರೆ ಸಾಕ್ಷಿ ರಾಷ್ಟ್ರೀಯ ಹೆದ್ದಾರಿಯಿಂದ ನಮ್ಮ ಆಸ್ತಿಗೆ ಹೋಗುವ ದಾರಿ ಎಂದು ನುಡಿದಿರುತ್ತಾರೆ. ನಿಪಿ–15 ನಕಾಶೆಯ ಪ್ರಕಾರ ನಮ್ಮ ಆಸ್ತಿಗೆ ಉತ್ತರ–ಪಶ್ಚಿಮ (ನೈಋುತ್ಯ) ದಿಕ್ಕಿನಲ್ಲಿ ಹೋಗುವ ರಸ್ತೆ ಇರುತ್ತದೆ ಆದರೆ ಆ ರಸ್ತೆಯನ್ನು 2ನೇ ಬೇಸ್ ಮೆಂಟ್ ಗೆ ಮಾತ್ರ ಉಪಯೋಗಿಸಲು ಕಾರ್ಪೋರೇಶನ್ ನಿಂದ ಅನುಮತಿ ನೀಡಿರುತ್ತಾರೆ ಎಂದು ನುಡಿದಿರುತ್ತಾರೆ. ನಮ್ಮ ನಕಾಶೆಯಂತೆ ನೈಋುತ್ಯ ದಿಕ್ಕಿನಿಂದ ಮಾತ್ರ ನಮ್ಮ ಆಸ್ತಿಗೆ ರಸ್ತೆ ಇರುವುದು

ಮತ್ತು ರಾಷ್ಟ್ರೀಯ ಹೆದ್ದಾರಿಯಿಂದ ಯಾವುದೇ ರಸ್ತೆ ಇರುವುದಿಲ್ಲ ಎಂದರೆ ಸರಿಯಲ್ಲ. ನಮ್ಮ ಆಸ್ತಿಯ ಪೂರ್ವದಲ್ಲಿ ಯಾವುದೇ ಕಾಂಪೌಂಡ್ ಇರುವುದಿಲ್ಲ. ನಮ್ಮ ಆಸ್ತಿಯ ಪೂರ್ವ ದಿಕ್ಕಿನಲ್ಲಿ ಕಾಂಪೌಂಡ್ ಗೋಡೆ ಇರುತ್ತದೆ ಎಂದರೆ ಸರಿಯಲ್ಲ. ನಮ್ಮ ಆಸ್ತಿಯಿಂದ 2ನೇ ಬೇಸ್ ಮೆಂಟ್ ಸುಮಾರು 20 ಅಡಿ ಆಳದಲ್ಲಿ ಇರುತ್ತದೆ. ರಾಷ್ಟ್ರೀಯ ಹೆದ್ದಾರಿಯಿಂದ ನಮ್ಮ ಆಸ್ತಿಗೆ ಹೋಗಲು ಯಾವುದೇ ಸಂಪರ್ಕ ರಸ್ತೆ ಇರುವುದಿಲ್ಲ ಆ ಕಾರಣದಿಂದ ರಾಷ್ಟ್ರೀಯ ಹೆದ್ದಾರಿಯಲ್ಲಿ ಇರುವ ಸರ್ಕಾರಿ ಜಾಗದಲ್ಲಿ ಬಸ್ ನಿಲ್ದಾಣ ನಿರ್ಮಾಣ ಮಾಡಿದರೆ ನಮಗೆ ಯಾವುದೇ ರೀತಿ ತೊಂದರೆ ಇರುವುದಿಲ್ಲ ಎಂದರೆ ಸಾಕ್ಷಿ ರಾಷ್ಟ್ರೀಯ ಹೆದ್ದಾರಿ ಬಿಟ್ಟ ನಂತರ ನಮ್ಮ ಆಸ್ತಿಯೇ ಇರುವುದು ಅದು ಸರ್ಕಾರಿ ಸ್ಥಳ ಇರುವುದಿಲ್ಲ ಎಂದು ನುಡಿದಿರುತ್ತಾರೆ. ನಾನು ದುರುದ್ದೇಶದಿಂದ ಈ ದಾವೆಯನ್ನು ದಾಖಲಿಸಿದ್ದೇನೆ ಮತ್ತು ಈ ದಾವೆಯಲ್ಲಿ ಕೋರಿರುವ ಪರಿಹಾರವನ್ನು ಪಡೆಯಲು ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ. ನಾನು ಈ ದಾವೆಯಲ್ಲಿ ಹೇಳಿರುವ ಎಲ್ಲಾ ವಿಷಯಗಳು ಸತ್ಯಕ್ಕೆ ದೂರವಾದವು ಎಂದರೆ ಸರಿಯಲ್ಲ. ನಿಪಿ-13ರಿಂದ ನಿಪಿ-15ರ ದಾಖಲೆಗಳನ್ನು ನಾನು ಈ ದಾವಾದ ಸಲುವಾಗಿಯೇ ಸೃಷ್ಟಿ ಮಾಡಿ ಹಾಜರುಪಡಿಸಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ.**

(ಮುಕ್ತ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಸ.ಇ.ಎ.ಒ.,

5ನೇ ಅಧಿಕ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.
ಮಂಗಳೂರು. (C/c)